# -: ವಾರ್ಡ್ ಸಮಿತಿ ಸಭೆ :-

## ದಿನಾಂಕ: 06.11.2021

ವಿಷಯ: ವಾರ್ಡ್ ಸಂಖ್ಯೆ 68 ಮಹಾಲಕ್ಷ್ಮೀಪುರದಲ್ಲಿ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.
ಉಲ್ಲೇಖ: ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)/ಪಿ.ಆರ್/35/ 2020-21 ದಿನಾಂಕ: 21.09.2020

ದಿನಾಂಕ 06.11.2021 ರಂದು ಸಮಯ ಬೆಳಿಗ್ಗೆ 11.30 ಗಂಟೆಗೆ ವಾರ್ಡ್ ಸಂಖ್ಯೆ 68 ಮಹಾಲಕ್ಷ್ಮೀಪುರ ವಾರ್ಡ್ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ರಾಜಶೇಖರ್, (ಅಧ್ಯಕ್ಷರು) ನೋಡಲ್ ಅಧಿಕಾರಿಗಳು
2. ಶ್ರೀ ವಿ.ಆರ್. ಕೃಷ್ಣಪ್ಪ ಸಹಾಯಕ ಅಭಿಯಂತರರು, ಹಾಗೂ ಕಾರ್ಯದರ್ಶಿ
3. ಅರುಣ್ ಕುಮಾರ್ ಹೆಚ್.ಆರ್. ಮೌಲ್ಯಮಾಪಕರು (ಕಂದಾಯ)
4. ಶ್ರೀಮತಿ ಗೀತಾ ಕೆ. ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಗಂಗಚಲುವಯ್ಯ (ಬಿ.ಡಬ್ಲ್ಯೂ.ಎಸ್.ಎಸ್.ಬಿ.)

ಶ್ರೀ ವಿ.ಆರ್. ಕೃಷ್ಣಪ್ಪ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

1. 60 ಅಡಿ ರಸ್ತೆಯಲ್ಲಿ ವ್ಯಾಪಾರಿಗಳಿಗೆ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದೇ ಶೇಖರಿಸಿ ಕಸದ ಆಟೋಗಳಿಗೆ ನೀಡುವಂತೆ ಕಟ್ಟು ನಿಟ್ಟಾಗಿ ಸೂಚಿಸಲು ಹೆಲ್ತ್ ಇನ್ಸ್ಪೆಕ್ಟರ್‌ಗಳಿಗೆ ತಿಳಿಸಲಾಯಿತು.
2. ವಾರ್ಡ್‌ನ ರಸ್ತೆಗಳನ್ನು ನೀರು ಮತ್ತು ಒಳಚರಂಡಿ ಸಂಪರ್ಕಕ್ಕಾಗಿ ಅಗೆಯುವಾಗ ಬಿ.ಬಿ.ಎಂ.ಪಿ. ಅನುಮತಿ ಇಲ್ಲದೇ ರಸ್ತೆ ಅಗೆಯುವುದು ಕಂಡುಬಂದಲ್ಲಿ ಸಂಬಂಧಪಟ್ಟ ವಾರ್ಡ‌ನ ಇಂಜಿನಿಯರ್ ಗಮನಕ್ಕೆ ತರಲು ತಿಳಿಸಲಾಯಿತು.
3. ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸಲು ಸೂಚಿಸಲಾಯಿತು.

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಎಲ್ಲಾ ಇಲಾಖೆಗಳು ಪರಸ್ಪರ ಚರ್ಚಿಸಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.

**ಸಹಾಯಕ ಅಭಿಯಂತರರು**
**ಮತ್ತು ಕಾರ್ಯದರ್ಶಿಗಳು,**
**ವಾರ್ಡ್ ನಂ. 68 ಮಹಾಲಕ್ಷ್ಮೀಪುರ**

**ಅಧ್ಯಕ್ಷರು**
**ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ 68,**
**ಮಹಾಲಕ್ಷ್ಮೀಪುರ**

## ವಾರ್ಡ್ ಸಂಖ್ಯೆ 68 ರ ವಾರ್ಡ್ ಕಮಿಟಿ ಸದಸ್ಯರುಗಳು

1. ಶ್ರೀ ರಾಜಶೇಖರ್, (ಅಧ್ಯಕ್ಷರು) ನೋಡಲ್ ಅಧಿಕಾರಿಗಳು
2. ಶ್ರೀ ವಿ.ಆರ್. ಕೃಷ್ಣಪ್ಪ ಸಹಾಯಕ ಅಭಿಯಂತರರು, ಹಾಗೂ ಕಾರ್ಯದರ್ಶಿ
3. ಅರುಣ್ ಕುಮಾರ್ ಹೆಚ್.ಆರ್. ಮೌಲ್ಯಮಾಪಕರು (ಕಂದಾಯ)
4. ಶ್ರೀಮತಿ ಗೀತಾ ಕೆ. ಕಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀ ಹೆಚ್. ರಮೇಶ್ ಸಹಾಯಕ ಇಂಜಿನಿಯರ್ (ಬೆಸ್ಕಾಂ)
6. ಶ್ರೀ ಗಂಗಚಲುವಯ್ಯ (ಬಿ.ಡಬ್ಲ್ಯೂ.ಎಸ್.ಎಸ್.ಬಿ.)